


# ಪಾತರಗಿತ್ತಿಗಳ ದೇವಲೋಕ!





**ಚಿತ್ರ-ಬರಹ: ರಂಜನಾ ಹೆಗಡೆ**

ಒಂದಲ್ಲ, ಎರಡಲ್ಲ.. ಒಂದೇ ಸೂರಿನಡಿಯಲ್ಲಿ 4 ಸಾವಿರಕ್ಕೂ ಹೆಚ್ಚು ಚಿಟ್ಟೆಗಳು! ಆಹಾ... ಪ್ರಕೃತಿಯ ವರ್ಣಲೋಕ ಅದೆಷ್ಟೊಂದು ಸುಂದರ!

ಮಲೇಷ್ಯಾದ ಸುಂದರ ಪುಟ್ಟ ದ್ವೀಪ ಪೆನಾಂಗ್‌ನ ಆಕರ್ಷಣೆಯ ಪಟ್ಟಿಗಳು ಪ್ರಮುಖ ಹೆಸರು ಇಲ್ಲಿಯ ಬಟರ್‌ಫ್ಲೈ ಪಾರ್ಕ್‌ನದ್ದು. ಇದು ವಿದೇಶೀ ಪ್ರವಾಸಿಗರ ಅಚ್ಚುಮೆಚ್ಚಿನ ತಾಣವಾದ 'ಬಾಟುಫೆರಂಗಿ'ಯ ಸಮುದ್ರತೀರದ ಹತ್ತಿರವಿರುವ ತೆಲುಕ್ ಬಹಾಂಗ್‌ನಲ್ಲಿದೆ.

1986ರಲ್ಲಿ ಡೇವಿಡ್ ಗೋ ಈ ಚಿಟ್ಟೆ ಪಾರ್ಕನ್ನು ಸ್ಥಾಪಿಸಿದ. ಪ್ರವಾಸಿಗರ ಆಕರ್ಷಣೆಯ ಜತೆಗೆ ಪಾತರಗಿತ್ತಿಗಳ ಜೀವನಕ್ರಮದ ಬಗ್ಗೆ ಜನರಿಗೆ ಮತ್ತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವುದೂ ಅವನ ಉದ್ದೇಶವಾಗಿತ್ತು. ಶಿಕ್ಷಣ, ಸಂಶೋಧನೆಗಳಿಗೆ ಪೂರಕವಾಗಿರುವಂತೆಯೇ ಈ ಉದ್ಯಾನವನ್ನು ನಿರ್ಮಿಸಿದ. ಉಷ್ಣವಲಯದ ಪ್ರದೇಶದಲ್ಲಿ ನಿರ್ಮಿತವಾದ ಜಗತ್ತಿನ ಪ್ರಪ್ರಥಮ 'ಪಾತರಗಿತ್ತಿಗಳ ಉದ್ಯಾನವನ' ಎಂಬ ಹೆಗ್ಗಳಿಕೆ ಇದರದ್ದು. ಇಲ್ಲಿ ಸುಮಾರು 150 ಪ್ರಬೇಧಗಳ ಪಾತರಗಿತ್ತಿಗಳಿವೆ.

ಮಲೆನಾಡಿನ ಮೂಲದ ನಮಗೆ ಪಾತರಗಿತ್ತಿಗಳು ಹೊಸತೇನಲ್ಲ. ಹಾಗಾಗಿ ಪೆನಾಂಗ್‌ನಲ್ಲೇ ನೆಲೆಸಿದ್ದರೂ ಈ ಉದ್ಯಾನವನ್ನು ನೋಡುವ ತವಕವೂ ಇರಲಿಲ್ಲ. ಆದರೆ ನನ್ನ ಮಾವನವರು ಮಲೇಷ್ಯಾ ಪ್ರವಾಸಕ್ಕೆಂದು ಬಂದಾಗ ಅಲ್ಲಿಗೆ ಕರೆದೊಯ್ದರು.

ಬೆಳಿಗ್ಗೆ 9 ಗಂಟೆಯಿಂದ ತೆರೆದಿರುವ ಉದ್ಯಾನಕ್ಕೆ ಟಿಕೆಟ್ ಖರೀದಿಸಲು ಭಾರೀ ನೂಕುನುಗ್ಗಲಿತ್ತು! ಒಳಹೋಗಿ ನೋಡಿದರೆ ಅದು ಬೇರೆಯೇ ಜಗತ್ತು. ಸಾವಿರಾರು ಚಿಟ್ಟೆಗಳು ನಮ್ಮನ್ನು ಸ್ವಾಗತಿಸುವಂತೆ ಎಲ್ಲೆಂದರಲ್ಲಿ ಹಾರಾಡುತ್ತಿದ್ದವು. ಎಷ್ಟೊಂದು ಬಣ್ಣಗಳು, ಎಂತಹ ವಿನ್ಯಾಸಗಳು! ಅತ್ಯಂತ ವಿರಳ ಜಾತಿಯ ಕಾಲಿಮಾ ಪರತಿಕ್ಟ, ರಾಜಾ ಬ್ರೂಕ್ಸ್ ವಿಂಗ್, ಟ್ರೈಯೋಡಸ್ ಹೆಲಿನಾ ಮುಂತಾದ ಚಿಟ್ಟೆಗಳೂ ಇಲ್ಲಿವೆ.

ಒಳಗೆ ನಡೆಯುತ್ತಾ ಹೋದರೆ ನಮ್ಮ ಕೈ, ತಲೆ, ಮುಖಕ್ಕೆಲ್ಲ ಮುತ್ತಿಕ್ಕುತ್ತವೆ ಈ ಪಾತರಗಿತ್ತಿಗಳು! ಮುಂದೆ ಸಾಗಿದರೆ ಬಗೆ ಬಗೆಯ ಹಲ್ಲಿಗಳು, ಉರಗಗಳು, ವಿಶಿಷ್ಟ ಜಾತಿಯ ಕೀಟಗಳು, ಚೇಳುಗಳ ಸಂಗ್ರಹಾಲಯವೂ ಇದೆ. ಅವುಗಳ ಜೀವನಚಕ್ರ, ಆಹಾರ, ಹೆಸರುಗಳ ಪ್ರಬೇಧಗಳ ಬಗ್ಗೆ ಮಾಹಿತಿಗಳಿದ್ದುವು. ಜತೆಗೆ ಬುಡಕಟ್ಟು ನಿವಾಸಿಗಳ ಉಡುಗೆ, ತೊಡುಗೆಗ ಮಾಹಿತಿಗಳೂ ಇದ್ದವು.

ಅಲ್ಲೇ ಒಂದು ಮಾನವ ನಿರ್ಮಿತ ಪುಟ್ಟ ಜಲಪಾತ, ಕಪ್ಪೆ, ಮೀನುಗಳು ಈಜಾಡುವ ಪುಟ್ಟ ಕೊಳ, ಕೊಳದಲ್ಲಿ ಅರಳಿರುವ ಸುಂದರ ಕಮಲಗಳು, ಬಣ್ಣದ ರೆಕ್ಕೆಗಳುಳ್ಳ ಬಾತುಕೋಳಿ! ಘಮಘಮಿಸುವ ಹೂವಿನ ಪರಿಮಳ, ಆರ್ಕಿಡ್ ಗಿಡಗಳು! ನಿಜಕ್ಕೂ ಇದು ಪಾತರಗಿತ್ತಿಗಳ ದೇವಲೋಕ!